ಸಂಖ್ಯೆ: ಇಡಿ/ಕೆಇಎ/ಪಿಜಿಆಯುಷ್/2024

ದಿನಾಂಕ: 05-11-2024

**ಪಿಜಿ ಆಯುಷ್ – 2024 ಆಯುರ್ವೇದ / ಯುನಾನಿ / ಹೋಮಿಯೋಪತಿ / ನ್ಯಾಚುರೋಪತಿ ಮತ್ತು ಯೋಗ ಸ್ನಾತಕೋತ್ತರ ಪದವಿ ಕೋರ್ಸುಗಳ ಪ್ರವೇಶಾತಿಗೆ ಮೊದಲನೇ ಸುತ್ತಿನ ಸೀಟು ಹಂಚಿಕೆ – 2024**

ಪಿಜಿ ಆಯುಷ್ ಸ್ನಾತಕೋತ್ತರ ಪದವಿ ಕೋರ್ಸುಗಳ ಪ್ರವೇಶಾತಿಗೆ ಸೀಟ್ ಮ್ಯಾಟ್ರಿಕ್ಸ್ ಮತ್ತು ಶುಲ್ಕದ ವಿವರಗಳನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ. Ayush Admissions Central Counseling Committee (AACCC) ರವರ ಸೂಚನೆಯಂತೆ ಅಭ್ಯರ್ಥಿಗಳು ಕ್ರಮವಹಿಸಲು ನಿರ್ದೇಶಿಸಿದೆ. ಇದರ ಅನ್ವಯ, ಈಗಾಗಲೇ ಅಖಿಲ ಭಾರತ ಮಟ್ಟದ ಕೌನ್ಸಿಲಿಂಗ್‌ನಲ್ಲಿ ಕಾಲೇಜುಗಳಲ್ಲಿ ಪ್ರವೇಶ ಪಡೆದಿರುವ ಅಭ್ಯರ್ಥಿಗಳು ಪ್ರಾಧಿಕಾರದ ಮೂಲಕ ಸೀಟುಗಳನ್ನು ಪಡೆಯುವುದಕ್ಕಾಗಿ ಭಾಗವಹಿಸಲು ಅರ್ಹತೆ ಪಡೆಯುವುದಿಲ್ಲ.

1. ಸೀಟ್ ಮ್ಯಾಟ್ರಿಕ್ಸ್ ಪಟ್ಟಿಯನ್ನು ಸರಿಯಾಗಿ ಅಭ್ಯಾಸ ಮಾಡಿ, ಶುಲ್ಕದ ವಿವರಗಳನ್ನು ನೋಡಿ.
2. ಖಾಸಗಿ ಕಾಲೇಜುಗಳಲ್ಲಿ ಸರ್ಕಾರದ ಸೀಟುಗಳು, ಆಡಳಿತ ಮಂಡಳಿ ಕೋಟದ ಸೀಟುಗಳು, ಎನ್‌ಆರ್‌ಐ / ಆಡಳಿತ ಮಂಡಳಿ ಕೋಟದ ಸೀಟುಗಳಿಗೆ ಪ್ರತ್ಯೇಕವಾದ ಶುಲ್ಕಗಳು ಇದೆ ಎಂಬುದನ್ನು ಮನನ ಮಾಡಿಕೊಂಡು, ಮೊದಲು ನಿಮಗೆ ಇಚ್ಛೆಯಿರುವ ಕೋರ್ಸು/ ಕಾಲೇಜುಗಳ ಒಂದು ಪಟ್ಟಿಯನ್ನು ಮಾಡಿಕೊಳ್ಳಿ.
3. ಇಚ್ಛೆಯನ್ನು (Option) ನಮೂದಿಸುವಾಗ, ಆದ್ಯತಾ ಕ್ರಮ (prioritization) ಅನುಸರಿಸಿ.
4. ನಿಮಗೆ ಅತ್ಯಂತ ಹೆಚ್ಚು ಇಷ್ಟವಿರುವ ಕೋರ್ಸನ್ನು/ ಕಾಲೇಜುಗಳನ್ನು ಮೊದಲ ಆದ್ಯತೆಯ ಕ್ರಮ ಸಂಖ್ಯೆಗಳಲ್ಲಿ ನಮೂದಿಸಿ.
5. ವಿದ್ಯಾರ್ಥಿಗಳು ಇಚ್ಛೆಗಳನ್ನು ಆರಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ, ಮನೆಯಲ್ಲಿ ಪೂರ್ವಾಭ್ಯಾಸ ಮಾಡದೆ, ಅಂತರ್ಜಾಲದಲ್ಲಿನ ಆನ್‌ಲೈನ್ ಆಯ್ಕೆ ನಮೂನೆಯಲ್ಲಿ ನೇರವಾಗಿ ತಮ್ಮ ಇಚ್ಛೆಗಳನ್ನು ನಮೂದಿಸಬಾರದೆಂದು ಸಲಹೆ ನೀಡಲಾಗಿದೆ.
6. ಸೀಟು ಹಂಚಿಕೆ ಮಾಡುವುದಕ್ಕಾಗಿ ತಮಗೆ ಇಷ್ಟವಿರುವ ಕೋರ್ಸು, ಕಾಲೇಜುಗಳಿಗೆ ಇಚ್ಛೆಗಳನ್ನು ನಮೂದಿಸುವಾಗ ವಿದ್ಯಾರ್ಥಿಗಳು ಅತ್ಯಂತ ಎಚ್ಚರಿಕೆಯಿಂದ ನಮೂದಿಸಬೇಕು.

**ಇಚ್ಛೆ / ಅಯ್ಕೆಯನ್ನು ದಾಖಲಿಸುವ ಬಗ್ಗೆ ಮುಖ್ಯ ಸೂಚನೆ**

ಮೊದಲನೇ ಸುತ್ತಿನ ಸೀಟು ಹಂಚಿಕೆಗೆ ದಾಖಲಿಸುವ ಇಚ್ಛೆ / ಆಯ್ಕೆಗಳು, ಎಲ್ಲಾ ಸುತ್ತುಗಳಿಗೆ ಅನ್ವಯಿಸುತ್ತದೆ. ಹೊಸದಾಗಿ ಇಚ್ಛೆ / ಆಯ್ಕೆಗಳನ್ನು ದಾಖಲಿಸಲು ಅಭ್ಯರ್ಥಿಗಳಿಗೆ ಅವಕಾಶವಿರುವುದಿಲ್ಲ. ಎರಡನೇ ಸುತ್ತಿನಲ್ಲಿ ದಾಖಲಿಸಿದ ಇಚ್ಛೆ / ಆಯ್ಕೆಗಳನ್ನು ತೆಗೆದು ಹಾಕಲು ಅಥವಾ ಕ್ರಮಾಂಕಗಳನ್ನು ಬದಲಾಯಿಸಲು, ಅಭ್ಯರ್ಥಿಗಳು ಸೀಟು ಹಂಚಿಕೆಯ ಫಲಿತಾಂಶದ ನಂತರ opt ಮಾಡುವ **CHOICE** ಮೇಲೆ ಅವಲಂಬಿತವಾಗಿರುತ್ತದೆ.

- ನಿಗದಿಪಡಿಸಿರುವ ಶೈಕ್ಷಣಿಕೆ ಅರ್ಹತೆ / ಕಾಲೇಜುಗಳ ಪ್ರವೇಶ / ಸೀಟು ಹಂಚಿಕೆ ಇತ್ಯಾದಿಗಳು NCISM, NCH, ಸರ್ಕಾರ, ಸಂಬಂಧಿಸಿದ ವಿಶ್ವವಿದ್ಯಾಲಯಗಳು, ಅಪೆಕ್ಸ್ ಸಂಸ್ಥೆಗಳು ಕಾಲ ಕಾಲಕ್ಕೆ ನಿಗದಿಡಿಸುವ ನಿಯಮಗಳಿಗೆ / ಅನುಮೋದನೆಗೆ / ಷರತ್ತಿಗೆ ಒಳಪಟ್ಟಿರುತ್ತವೆ;
- ಸಕ್ಷಮ ಪ್ರಾಧಿಕಾರವು ನಿಗದಿಪಡಿಸಿದ ಅರ್ಹತಾ ಮಾನದಂಡಗಳನ್ನು ಅಥವಾ ನಿಬಂಧನೆಗಳನ್ನು ಪೂರೈಸದ ಅಭ್ಯರ್ಥಿಯ ಪ್ರವೇಶವನ್ನು ಯಾವುದೇ ಸಮಯದಲ್ಲಿ ಹಿಂತೆಗೆದುಕೊಳ್ಳುವ ಹಕ್ಕನ್ನು ಕೆಇಎ ಕಾಯ್ದಿರಿಸುತ್ತದೆ.

ಕಾರ್ಯನಿರ್ವಾಹಕ ನಿರ್ದೇಶಕರು

ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

No. ED/KEA/PGAYUSH/2024 Date: 05-11-2024

PG AYUSH-2024

First Round Schedule for allotment of seats to

PG Ayurveda, Unani, Homoeopathy, Naturopathy & Yoga Degree Courses – 2024

| | | |
|---|---|---|
| 01 | ಇಚ್ಛೆ / ಆಯ್ಕೆಗಳನ್ನು ದಾಖಲಿಸುವುದು. (ಆದ್ಯತಾ ಕ್ರಮದಲ್ಲಿ)<br>Entry of options (In the order of priority) | From 7.00 pm on 06-11-2024 To 08-11-2024 Up to 1.00 pm |
| 02 | ಅಣುಕು ಸೀಟು ಹಂಚಿಕೆಯ ಫಲಿತಾಂಶ<br>Mock seat allotment results | 08-11-2024 after 8.00 pm |
| 03 | ಆಯ್ಕೆಗಳನ್ನು ಬದಲಾಯಿಸಲು ಅವಕಾಶ (ಅಭ್ಯರ್ಥಿಗಳು ಅಣುಕು ಸೀಟು ಹಂಚಿಕೆಯ ಫಲಿಂತಾಂಶವನ್ನು ಪರಿಶೀಲಿಸಿದ ನಂತರ ಇಚ್ಛೆ / ಆಯ್ಕೆಗಳನ್ನು ಅವಶ್ಯವಿದ್ದಲ್ಲಿ ಬದಲಾಯಿಸಬಹುದಾಗಿದೆ / ಸೇರಿಸಬಹುದಾಗಿದೆ / ಅಳಿಸಬಹುದಾಗಿದೆ.)<br>After verifying the Mock Allotment results, candidates are free to change, reorder, delete and add to their choices of courses / colleges as per their preference. | From 8.00 pm 08-11-2024 To 11-11-2024 upto 11.00 am |
| 04 | ನೈಜ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ<br>Publication of first round allotment Result | 11-11-2024 after 6.00 pm |
| 05 | ಪೋಷಕರ ಜೊತೆ ಚರ್ಚಿಸಿ ಸೂಕ್ತವಾದ CHOICE ಅನ್ನು ಆಯ್ಕೆ ಮಾಡಿಕೊಳ್ಳಲು<br>Exercising appropriate CHOICE by the seat allotted candidates in consultation with their parents | From 7.00 pm on 11-11-2024 to 12-11-2024 upto 11.59 pm |
| 06 | Choice 1 and Choice 2 ಆಯ್ಕೆ ಮಾಡಿದ ಅಭ್ಯರ್ಥಿಗಳು ಚಲನ್ ಡೌನ್ ಲೋಡ್ ಮಾಡುವುದು<br>Downloading of Challan by Choice 1 and Choice 2 candidates | 12-11-2024 to 13-11-2024<br>During banking working hours |
| 07 | Choice 1 and Choice 2 ಆಯ್ಕೆ ಮಾಡಿದ ಅಭ್ಯರ್ಥಿಗಳು ಶುಲ್ಕ ಪಾವತಿ ಮಾಡುವುದು<br>Payment of fees by Choice 1 and Choice 2 Candidates | |
| 08 | Choice 1 ಆಯ್ಕೆ ಮಾಡಿ ಶುಲ್ಕ ಪಾವತಿ ಮಾಡಿದ ಅಭ್ಯರ್ಥಿಗಳು ಪ್ರವೇಶ ಆದೇಶವನ್ನು ಡೌನ್‌ಲೋಡ್ ಮಾಡಿಕೊಳ್ಳುವುದು.<br>Downloading of Admission Orders by fee paid candidates | 12-11-2024 to 13-11-2024 |
| 09 | ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಕೊನೆಯ ದಿನಾಂಕ (ಎಲ್ಲಾ ಮೂಲ ದಾಖಲಾತಿಗಳೊಂದಿಗೆ – Verification slip ನಲ್ಲಿ ನಮೂದಿಸಿರುವಂತೆ)<br>Last Date for Reporting at the Allotted Colleges (Choice -1 Candidates Only) along with all the originals as per Verification slip | 14-11-2024 before 5.30 pm |

ಟಿ.ಸೂ. ಈ ಮೇಲ್ಕಂಡ ವೇಳಾಪಟ್ಟಿಯ ಬಗ್ಗೆ ಅಭ್ಯರ್ಥಿಗಳಿಗೆ ವೈಯಕ್ತಿಕವಾಗಿ ಮಾಹಿತಿಯನ್ನು ಕಳುಹಿಸಲಾಗುವುದಿಲ್ಲ.

No individual intimation will be sent to candidates with regard to above schedule.

Executive Director.

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583 Helpline : 080 - 23 460 460.
e-mail : keauthority-ka@nic.in Website : http://kea.kar.nic.in